ಇ-ಮೇಲ್ obccell@uni-mysore.ac.in
ದೂರವಾಣಿ ಸಂಖ್ಯೆ. 0821-2419 906

# ಮೈಸೂರು ವಿಶ್ವವಿದ್ಯಾನಿಲಯ

(4..0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್-2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47 ನೇ ಸ್ಥಾನ)

ಹಿಂದುಳಿದ ವರ್ಗಗಳ ಕೋಶದ ಕಛೇರಿ
ಸೆನೆಟ್ ಭವನ, ಮಾನಸಗಂಗೋತ್ರಿ
ಮೈಸೂರು-570 006

ಸಂಖ್ಯೆ:ಹಿ.ವ.ಕೋ-ಜಿಎಲ್-01/111 /2020-21

ದಿನಾಂಕ-23-03-2021

## ಅಧಿಸೂಚನೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಕೋಶ ಘಟಕದ ವತಿಯಿಂದ 2021-22ನೇ ಸಾಲಿನಲ್ಲಿ ಅರ್ಹ 22 ಸಂಶೋಧಕ ವಿದ್ಯಾಥಿಗಳಿಗೆ ಶಿಷ್ಯವೇತನ ನೀಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

*********

ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಕೋಶ ಘಟಕದ ವತಿಯಿಂದ ಯುಜಿಸಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ನಿಯಮಾವಳಿಗಳ ಪ್ರಕಾರ ಸಂಶೋಧನಾ ಕಾರ್ಯವನ್ನು ನಿರ್ವಹಿಸುವ ಸಂಶೋಧನ ವಿದ್ಯಾರ್ಥಿಗಳಿಗೆ **ಶಿಷ್ಯವೇತನ ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನು ಶೇ. 55ಕ್ಕಿಂತ ಹೆಚ್ಚು ಅಂಕ** ಪಡೆದಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ 2021-22 ಸಾಲಿನ 22 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಅರ್ಜಿ ಶುಲ್ಕ ರೂ. 100/-(ನೂರು ರೂಪಾಯಿಗಳು ಮಾತ್ರ) ಗಳನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಗೆ (ಜಿಆರ್‌ಎ) ಕ್ರಾಫರ್ಡ್ ಭವನ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ** ಜಮಾ ಮಾಡಿರುವ ಮೂಲ ಚಲನ್ ಅನ್ನು ಅರ್ಜಿಯ ಜೊತೆಗೆ **ಸಂಯೋಜನಾಧಿಕಾರಿಗಳು, ಹಿಂದುಳಿದ ವರ್ಗಗಳ ಘಟಕ, ಸೆನೆಟ್ ಭವನ, ಮಾನಸಗಂಗೋತ್ರಿ ಮೈಸೂರು** ಕಛೇರಿಗೆ ತಲುಪಿಸಬೇಕು. ನಿಗಧಿತ ನಮೂನೆಯ ಅರ್ಜಿಗಳನ್ನು ದಿನಾಂಕ:24-03-2021 ರಿಂದ ಸಮಯ:10.00ರಿಂದ 5:30ವರೆಗೆ ಕಛೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿದೆ, ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು ದಿನಾಂಕ:15-04-2021 ಸಂಜೆ 5.30 ಗಂಟೆಯೊಳಗೆ ಹಿಂದುಳಿದ ವರ್ಗಗಳ ಕೋಶ, ಘಟಕದ ಕಛೇರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಸಲಾಗಿದೆ.

**ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯದವರಾಗಿದ್ದು, ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು. ಅಪೂರ್ಣಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

1. **ವಯೋಮಿತಿ:** 23 ವರ್ಷ ಕನಿಷ್ಠ ವಯಸ್ಸು, ಹಾಗೂ 35 ವರ್ಷ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.
2. **ಜಾತಿ ಮತ್ತು ಆದಾಯ ಪ್ರಮಾಣ ಪತ್ರ:**
   ವಿದ್ಯಾರ್ಥಿ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯಮಿತಿ ಕೆಳಕಂಡತಿರಬೇಕು.

a. Category-I ರೂ.4.50 ಲಕ್ಷಗಳು ಹಾಗೂ Category-II(A), II(B), III(A), III(B) Rs.3.50 ಲಕ್ಷಗಳು ವಾರ್ಷಿಕ ಆದಾಯವನ್ನು ಮೀರಿರಬಾರದು.

b. ಆದಾಯ ಪ್ರಮಾಣಪತ್ರವು ಅಧಿಸೂಚನೆ ಹೊರಡಿಸಿದ ದಿನಾಂಕದ ಹಿಂದಿನ 6 ತಿಂಗಳ ಒಳಗಿರಬೇಕು.

3. **ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು:**

a. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ **ಮಾರ್ಗದರ್ಶಕರು** ಮೈಸೂರು ವಿಶ್ವವಿದ್ಯಾನಿಲಯದ ನೇರ ಅಧೀನಕ್ಕೊಳಪಟ್ಟಿರಬೇಕು ಮತ್ತು (Guide Recognition Certificate from University of Mysore) (ಮಾನಸ ಗಂಗೋತ್ರಿ, ಮಂಡ್ಯ, ಹಾಸನ, ಮತ್ತು ಚಾಮರಾಜನಗರ ಪಿ.ಜಿ ಸೆಂಟರ್ ಸ್ನಾತಕೋತ್ತರ ಕೇಂದ್ರಗಳು.

b. ಶುಲ್ಕ ಪಾವತಿಸಿದ ಮೂಲ ಚಲನ್.

c. ಮಾರ್ಗದರ್ಶಕರ ಒಪ್ಪಿಗೆ ಪತ್ರ.

d. ಪಿಹೆಚ್.ಡಿ. ನೋಂದಣಿ ಪತ್ರ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ 3 ವರ್ಷದೊಳಗಿರಬೇಕು.

e. ಎಲ್ಲಾ ಅಂಕಪಟ್ಟಿಗಳ ಪ್ರತಿಗಳು-ಎಸ್.ಎಸ್.ಎಲ್.ಸಿ ಯಿಂದ ಸ್ನಾತಕೋತ್ತರ ಪದವಿಯವರೆಗೆ ನೀಡುವುದು.

f. ಆಧಾರ್ ಕಾರ್ಡ್.

ಈ ಎಲ್ಲಾ ದಾಖಲಾತಿಗಳನ್ನು ಲಗತ್ತಿಸುವುದು (ಲಗತ್ತಿಸುವ ಎಲ್ಲಾ ದಾಖಲಾತಿಗಳು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿರಬೇಕು). ಮೇಲಿನಂತೆ ಅರ್ಜಿ ಮತ್ತು ದಾಖಲಾತಿಗಳನ್ನು ಮಾರ್ಗದರ್ಶಕರು ಹಾಗೂ ವಿಭಾಗದ ಅಧ್ಯಕ್ಷರು/ನಿರ್ದೇಶಕರು/ಪ್ರಾಂಶುಪಾಲರ ಮುಖಾಂತರ **"ಸಂಯೋಜನಾಧಿಕಾರಿಗಳು, ಹಿಂದುಳಿದ ವರ್ಗಗಳ ಘಟಕ"** ಕ್ಕೆ ಸಲ್ಲಿಸತಕ್ಕದ್ದು.

24/03/2021
ಸಂಯೋಜನಾಧಿಕಾರಿ

**ಕುಲಸಚಿವರಿಂದ ಕರಡು ಅನುಮೋದಿಸಿದೆ**

ಗೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ವಾರ್ತಾ ಭವನ, ಮೈಸೂರು ಜಿಲ್ಲೆ, ಮೈಸೂರು.
2. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಇವರಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಪ್ರಕಟಣೆಯನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಬೇಕೆಂದು ಕೋರಲಾಗಿದೆ.
3. ನಿಲಯದ ನಿರ್ದೇಶಕರು, ಆಕಾಶವಾಣಿ ಕೇಂದ್ರ, ಮೈಸೂರು ರವರು ಈ ಪ್ರಕಟಣೆಯನ್ನು ಉಚಿತವಾಗಿ ನಿಮ್ಮ ನಿಲಯದಿಂದ ಬಿತ್ತರಿಸಬೇಕೆಂದು ಕೋರಲಾಗಿದೆ.
4. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು, ಮಾನಸಗಂಗೋತ್ರಿ, ಮೈಸುರು ಹಾಗೂ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ, ಮಂಡ್ಯ ಮತ್ತು ಹಾಸನ.
5. ಪ್ರಾಂಶುಪಾಲರು, ಮಹಾರಾಜ/ಯುವರಾಜ/ಲಲಿತ ಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಆಡಳಿತಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸುರು.
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
8. ಮಾನ್ಯ ಕುಲಪತಿಯವರ/ಕುಲಸಚಿವರ/ಕುಲಸಚಿವರು(ಪರೀಕ್ಷಾಂಗ) ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
9. ಕಛೇರಿ ಪ್ರತಿ.

ವಿ.ವಿ ವೆಬ್‌ಸೈಟ್ ವಿಳಾಸ www.uni-mysore.ac.in ನ್ನು ನೋಡುವುದು.